ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

कर्नाटक–संस्कृत–विश्वविद्यालय:
श्री चामराजेन्द्र संस्कृत महाविद्यालयस्य परिसर:
पम्पमहाकविमार्ग:, चामराजपेटे, बेङ्गलूरु – ५६००१८.

ಸಂಖ್ಯೆ: ಕಸಂವಿ/ಪರೀಕ್ಷಾಂಗ/ಸಂ.ಸ್ನಾ ಹಾಗೂ ವಿ.ಪ.ಸ್ನಾ.ಪ–01/2020–21 ದಿನಾಂಕ: 31/03/2022

# ಅಧಿಸೂಚನೆ

ವಿಷಯ: ಕೋವಿಡ್–19 ಎರಡನೇ ಅಲೆಯ ಸಂದರ್ಭದಲ್ಲಿ ಪರೀಕ್ಷೆಯಿಂದ ವಂಚಿತರಾದ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಅಂತಹ ವಿದ್ಯಾರ್ಥಿಗಳಿಗೆ ಪುನ: ಪರೀಕ್ಷೆ ನಡೆಸಲು 22.03.22 ರಂದು ನಡೆದ ಕ.ಸಂ.ವಿ.ಡೀನ್ಸ್ ಕೌನ್ಸಿಲ್ ಸಭೆಯಲ್ಲಿ ನಿರ್ಣಯಿಸಿದಂತೆ 2020–21 ನೇ ಸಾಲಿನ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪರಿಸರದ ಸಂಸ್ಕೃತ ಎಂ.ಎ ದ್ವಿತೀಯ ಹಾಗೂ ಚತುರ್ಥ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ (ಕೋವಿಡ್–19 ಎರಡನೇ ಅಲೆಯ ಸಂದರ್ಭದಲ್ಲಿ ಪರೀಕ್ಷೆಯಿಂದ ವಂಚಿತರಾದ) ಪುನ: ಪರೀಕ್ಷೆ ನಡೆಸಲು ಸಂಬಂಧಿಸಿದಂತೆ ವಿದ್ಯಾರ್ಥಿಗಳಿಂದ ಪರೀಕ್ಷಾ ಅರ್ಜಿಗಳನ್ನು ಆಹ್ವಾನಿಸುವ ಬಗೆಗೆ.

ಉಲ್ಲೇಖ:– ಮಾನ್ಯ ಕುಲಪತಿಳ ಒಪ್ಪಿಗೆ ಕಂಡಿಕೆ ಸಂಖ್ಯೆ:–24 ದಿನಾಂಕ:–31/03/2022

| ಅಭ್ಯರ್ಥಿಗಳಿಂದ ಅರ್ಜಿಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ | ಡಿ.ಡಿ.ಯನ್ನು ಸ್ವೀಕರಿಸುವ ಕೊನೆಯ ದಿನಾಂಕ | ವಿಳಂಬ ಶುಲ್ಕದೊಂದಿಗೆ ಬ್ಯಾಂಕ್ ಹುಂಡಿ ತೆಗೆಯುವ ದಿನಾಂಕ | ಬ್ಯಾಂಕ್ ಹುಂಡಿಗಳ ಸಹಿತ ಅರ್ಜಿಗಳನ್ನು ಅಧ್ಯಯನಾಂಗದ ಕಾರ್ಯಾಲಯಕ್ಕೆ ತಲುಪಿಸುವ ದಿನಾಂಕ |
|---|---|---|---|
| 01/04/2022 | 04/04/2022 | 05/04/2022 | 06/04/2022 |

**ಸೂಚನೆಗಳು:–**

1. ವಿದ್ಯಾರ್ಥಿಗಳು ಅರ್ಜಿಗಳನ್ನು ಅಧ್ಯಯನಾಂಗದ ಮುಖಾಂತರ ಸಲ್ಲಿಸುವುದು. ಯಾವುದೇ ಕಾರಣಕ್ಕೂ ಅರ್ಜಿಗಳನ್ನು ಪರೀಕ್ಷಾಂಗವು ನೇರವಾಗಿ ಸ್ವೀಕರಿಸುವುದಿಲ್ಲ.
2. ಪರೀಕ್ಷಾ ಶುಲ್ಕದ ಹುಂಡಿ (ಡಿ.ಡಿ.)ಯನ್ನು **"ಹಣಕಾಸು ಅಧಿಕಾರಿಗಳು, ಪರೀಕ್ಷಾಂಗ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಬೆಂಗಳೂರು (Finance Officer, Exam Section, Karnataka Samskrit University, Bangalore)"** ಈ ಹೆಸರಿನಲ್ಲಿ ಪಡೆದು ನಿಗದಿತ ದಿನಾಂಕದಂದು ಅರ್ಜಿಯೊಂದಿಗೆ ವಿಶ್ವವಿದ್ಯಾಲಯಕ್ಕೆ ಸಲ್ಲಿಸುವುದು. ನಿಗದಿತ ದಿನಾಂಕದ ನಂತರ ಬಂದ ಅರ್ಜಿಗಳನ್ನು ಮಾನ್ಯ ಮಾಡಲಾಗುವುದಿಲ್ಲ.
3. ಎಂ.ಎ ತರಗತಿಗಳ ಪರೀಕ್ಷೆಗಳು ನಿಗದಿಪಡಿಸಿರುವ ಹೊಸ ಪಠ್ಯ ಕ್ರಮದಂತೆ ನಡೆಯುತ್ತವೆ. ಹೊಸ ಪಠ್ಯಕ್ರಮದ ಮಾಹಿತಿ ಅಥವಾ ಪಠ್ಯಪುಸ್ತಕದ ಕೈಪಿಡಿಯ ಮಾಹಿತಿಯ ಬಗ್ಗೆ ಅಧ್ಯಯನಾಂಗದ ನಿರ್ದೇಶಕರನ್ನು ಸಂಪರ್ಕಿಸುವುದು.
4. ಎಂ.ಎ ವಿದ್ಯಾರ್ಥಿ (ರೆಗ್ಯುಲರ್), ಎಂ.ಫಿಲ್–ಪಿ.ಹೆಚ್.ಡಿ ಪುನಾರಾವರ್ತಿತ ಅಭ್ಯರ್ಥಿಗಳಿಗೆ ಪ್ರತ್ಯೇಕ ಅರ್ಜಿ ನಮೂನೆಗಳಿರುವುದಿಲ್ಲ. ಪರೀಕ್ಷಾಂಗವು ನೀಡಿರುವ ಅಧಿಕೃತ ನಮೂನೆಯಲ್ಲಿ ಮಾಹಿತಿಯನ್ನು ಸ್ಪಷ್ಟವಾಗಿ ನಮೂದಿಸಿ ಸಲ್ಲಿಸುವುದು. ನಿಗದಿತ ಅರ್ಜಿಗಳನ್ನು ಅಧ್ಯಯನಾಂಗದಿಂದ ಸ್ವೀಕರಿಸುವುದು.
5. **ಪರೀಕ್ಷೆಯನ್ನು ತೆಗೆದುಕೊಳ್ಳುವ ಎಲ್ಲಾ ಅಭ್ಯರ್ಥಿಗಳಿಂದ ಇತ್ತೀಚಿನ 2 ಭಾವ ಚಿತ್ರಗಳನ್ನು ಪಡೆದು ಒಂದನ್ನು** ಅರ್ಜಿಗೂ, ಮತ್ತೊಂದನ್ನು ಪ್ರವೇಶ ಪತ್ರಕ್ಕೂ ಲಗತ್ತಿಸಿ ಅಧ್ಯಯನಾಂಗದ ನಿರ್ದೇಶಕರು ದೃಢೀಕರಿಸಿ ಕಳುಹಿಸುವುದು.
6. ತರಗತಿವಾರು ಪರೀಕ್ಷಾ ಶುಲ್ಕವನ್ನು ಈ ಕೆಳಕಂಡ ಪಟ್ಟಿಯಲ್ಲಿ ತಿಳಿಸಿದೆ. ಸರ್ಕಾರದ ಆದೇಶ ಸಂಖ್ಯೆ:– **"ಇಡಿ 295 ಯುಎನ್ಇ 2018, ದಿನಾಂಕ :– 23/01/2019 ರಂತೆ"** ಹಾಗೂ **ದಿ :–13/03/2019 ರಂದು ನಡೆದ ಪ್ರಶಾಸನ ಸಮಿತಿಯ ಸಭೆಯ 51 ನೇ ನಿರ್ಣಯದಂತೆ** ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಪ್ರವರ್ಗ–1ರ ವಿದ್ಯಾರ್ಥಿಗಳಿಗೆ ಒಟ್ಟು ಪರೀಕ್ಷಾ ಶುಲ್ಕದಲ್ಲಿ ಶೇ 50 ರಷ್ಟು ವಿನಾಯಿತಿಯನ್ನು ನೀಡಲಾಗಿದೆ. ವಿನಾಯಿತಿ ಪಡೆಯುವ

ವಿದ್ಯಾರ್ಥಿಗಳು ತಹಶೀಲ್ದಾರ್‌ರವರಿಂದ ಪಡೆದ ಜಾತಿ ಪ್ರಮಾಣ ಪತ್ರದ ಜೆರಾಕ್ಸ್ ಪ್ರತಿಯನ್ನು ದೃಢೀಕರಿಸಿ ಸಲ್ಲಿಸುವುದು. **ಜಾತಿ ಪ್ರಮಾಣ ಪತ್ರದ ಜೆರಾಕ್ಸ್ ಪ್ರತಿಯನ್ನು ಸಲ್ಲಿಸದಿದ್ದಲ್ಲಿ ಅಂತಹ ಅರ್ಜಿಯನ್ನು ತಿರಸ್ಕರಿಸಲಾಗುವುದು.**

**ಪರೀಕ್ಷಾ ಶುಲ್ಕದ ವಿವರ.**

| ಕ್ರ. ಸಂ | ಪರೀಕ್ಷೆಗಳ ವಿವರ | ಪರೀಕ್ಷಾ ಶುಲ್ಕ | ಅರ್ಜಿ ಶುಲ್ಕ | ಅಂಕಪಟ್ಟಿ ಶುಲ್ಕ | ಒಟ್ಟು ಮೊತ್ತ | ವಿಳಂಬ ಶುಲ್ಕ |
|---|---|---|---|---|---|---|
| 1 | ಸಂಸ್ಕೃತ ಎಂ.ಎ. | ಎಂ.ಎ.2 ನೇ ಸೆಮೆಸ್ಟರ್– 650/–<br>ಎಂ.ಎ.4 ನೇ ಸೆಮೆಸ್ಟರ್– 650/ | **20.00** | **30.00** | **700.00** | **100.00** |
| 2. | ಪುನರಾವರ್ತಿತ ವಿದ್ಯಾರ್ಥಿಗಳಿಗೆ | ಒಂದು ಪತ್ರಿಕೆಗೆ 200/– ಮಾತ್ರ (ಒಂದು ಪತ್ರಿಕೆಗಿಂತ ಹೆಚ್ಚು ಪತ್ರಿಕೆಗಳಿಗೆ ಪೂರ್ಣ ಶುಲ್ಕವನ್ನು ಭರಿಸತಕ್ಕದ್ದು.) | – | – | – | – |

7. ಅರ್ಜಿಯಲ್ಲಿ ಕಡ್ಡಾಯವಾಗಿ ತಂದೆ ಹಾಗೂ ತಾಯಿಯ ಹೆಸರನ್ನು ನಮೂದಿಸುವುದು. ಜನ್ಮ ದಿನಾಂಕಕ್ಕೆ ಸಂಬಂಧಪಟ್ಟ ದಾಖಲೆ ಜೆರಾಕ್ಸ ಪ್ರತಿಯನ್ನು ದೃಢೀಕರಿಸಿ ಸಲ್ಲಿಸುವುದು.

8. ಈ ಹಿಂದೆ ತೇರ್ಗಡೆಯಾಗಿರುವ ಅಂಕಪಟ್ಟಿಯ ಜೆರಾಕ್ಸ್ ಪ್ರತಿಯನ್ನು ದೃಢೀಕರಿಸಿ ಅರ್ಜಿಯ ಜೊತೆ ಲಗತ್ತಿಸುವುದು.

9. **ಯಾವುದೇ ಅಭ್ಯರ್ಥಿಗಳು ನೇರವಾಗಿ ಬಿ.ಎ ಮತ್ತು ಎಂ..ಎ ಅಂತಿಮ ವರ್ಷದ ಪರೀಕ್ಷೆಗಳನ್ನು ತೆಗೆದುಕೊಳ್ಳಲು ಅವಕಾಶವಿರುವುದಿಲ್ಲ.**

10. ಯಾವುದೇ ಸಂಸ್ಕೃತ ಪಾಠಶಾಲೆ/ಕಾಲೇಜಿನಲ್ಲಿ ಉದ್ಯೋಗದಲ್ಲಿರುವವರು/ಖಾಸಗಿ ಉದ್ಯೋಗಿಗಳು ಕಾಲೇಜಿನಲ್ಲಿ ರೆಗ್ಯುಲರ್ ವಿದ್ಯಾರ್ಥಿಗಳಾಗಿ ಪರೀಕ್ಷೆ ತೆಗೆದುಕೊಳ್ಳುವಂತಿಲ್ಲ.

11. ಹೊರ ರಾಜ್ಯದಲ್ಲಿ ಸಂಸ್ಕೃತವನ್ನು ಅಧ್ಯಯನ ಮಾಡಿ ಪ್ರಮಾಣ ಪತ್ರವನ್ನು ನೀಡಿ ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳ ಪ್ರಮಾಣ ಪತ್ರವು ವಿಶ್ವವಿದ್ಯಾಲಯದ ಪ್ರವೇಶಾರ್ಹತೆಯ ನಿಯಾಮಾವಳಿಗೆ ಅನುಗುಣವಾಗಿದ್ದಲ್ಲಿ ಮಾತ್ರ ಅಂತಹ ಅರ್ಜಿಗಳನ್ನು ಪರಿಗಣಿಸಲಾಗುವುದು.

12. ಅಧ್ಯಯನಾಂಗಕ್ಕೆ ಸಲ್ಲಿಸಬೇಕಾದ ಎಲ್ಲಾ ಪರೀಕ್ಷಾ ಸಂಬಂಧ ಮಾಹಿತಿಗಳನ್ನು ಕೇವಲ Microsoft word,pdf,image ನಲ್ಲಿ ಕಳುಹಿಸಬಾರದು. ಕೇವಲ Microsoft excel sheet ನಲ್ಲಿ ಕಳುಹಿಸಬೇಕು. Font size-12, Font name-Cambria (Headings). ವಿದ್ಯಾರ್ಥಿಗಳ ಮಾಹಿತಿಯನ್ನು ಸಿಡಿಯಲ್ಲಿ ಕಳುಹಿಸುವುದರ ಬದಲಾಗಿ examksu2016@gmail.com ಈ ಇ–ಮೇಲ್ ವಿಳಾಸಕ್ಕೆ ಸಕಾಲದಲ್ಲಿ ಕಳುಹಿಸುವುದು ಮತ್ತು ಪ್ರತಿಯನ್ನು (Hard Copy) ಪರೀಕ್ಷಾ ನಿಯಂತ್ರಕರು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ–18 ಈ ವಿಳಾಸಕ್ಕೆ ಕಳುಹಿಸುವುದು.

13. ಎಂ.ಎ ಎರಡನೇ ಸೆಮಿಸ್ಟರ್ ಹಾಗೂ ನಾಲ್ಕನೇ ಸೆಮಿಸ್ಟರ್ ವಿಭಾಗಗಳ ವಿದ್ಯಾರ್ಥಿಗಳ ಅರ್ಜಿ ಮತ್ತು ನಾಮಾಂಕಿತ ಪಟ್ಟಿಗಳನ್ನು ತರಗತಿವಾರು, ಪ್ರತ್ಯೇಕವಾಗಿ ಸಲ್ಲಿಸುವುದು ಹಾಗೂ ಎಂ.ಫಿಲ್–ಪಿ.ಹೆಚ್.ಡಿ ಕೋರ್ಸ್‌ವರ್ಕ್ ಪರೀಕ್ಷಾ ವಿದ್ಯಾರ್ಥಿಗಳ ಅರ್ಜಿ ಮತ್ತು ನಾಮಾಂಕಿತ ಪಟ್ಟಿಗಳನ್ನು ವಿಭಾಗವಾರು ಪ್ರತ್ಯೇಕವಾಗಿ ಸಲ್ಲಿಸಬೇಕು. ಈ ಅಧಿಸೂಚನೆಯ ಜೊತೆಗೆ ಲಗತ್ತಿಸಿರುವ 2 ನಮೂನೆಯನ್ನು ಭರ್ತಿ ಮಾಡಿ ಸಲ್ಲಿಸಬೇಕು. ನಮೂನೆ–2 ರಲ್ಲಿ ಐಚ್ಛಿಕ ವಿಷಯ ಮತ್ತು ವಿನಾಯಿತಿ ಇರುವ ವಿಷಯಗಳನ್ನು ಸ್ಪಷ್ಟವಾಗಿ ನಮೂದಿಸುವುದು

**14. ನೋಂದಣಿ ಸಂಖ್ಯೆಗಳು ಕ್ರಮ ಸಂಖ್ಯೆಯಲ್ಲಿ ಇರತಕ್ಕದ್ದು, ಇಲ್ಲದಿದ್ದಲ್ಲಿ ಫಲಿತಾಂಶ ಪ್ರಕಟಣೆ ಸಂದರ್ಭದಲ್ಲಿ ಗೊಂದಲವುಂಟಾಗುವ ಸಾಧ್ಯತೆ ಇರುತ್ತದೆ. ಎಲ್ಲಾ ಪುನರಾವರ್ತಿತ ವಿದ್ಯಾರ್ಥಿಗಳ ನೋಂದಣಿ ಸಂಖ್ಯೆಗಳನ್ನು ಕೊನೆಯಲ್ಲಿ ಸೇರಿಸುವುದು.**

15. ತರಗತಿವಾರು ಸಿದ್ಧಪಡಿಸಿದ ನಾಮಾಂಕಿತ ಪಟ್ಟಿಯ ಕೊನೆಯಲ್ಲಿ ಆಯಾ ಶಾಸ್ತ್ರ ಭಾಗಗಳಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ ಮತ್ತು ವರ್ಷ ಹಾಗೂ ಶುಲ್ಕದ ವಿವರಗಳನ್ನು ಸರಿಯಾಗಿ ನಮೂದಿಸುವುದು.

16. ಎಂ.ಎ ತರಗತಿಗಳ ಕಾಲೇಜು ಹಾಗೂ ಪುನರಾವರ್ತಿತ ಅಭ್ಯರ್ಥಿಗಳಿಗೆ ವಾರ್ಷಿಕ ಪರೀಕ್ಷೆಯಲ್ಲಿ ಪ್ರತಿಯೊಂದು ಪತ್ರಿಕೆಗಳಿಗೆ 70 ಅಂಕಗಳನ್ನು ಹಾಗೂ ಇನ್ನುಳಿದ 30 ಅಂಕಗಳನ್ನು ಆಂತರಿಕ ಪರೀಕ್ಷೆಗಳಿಗಾಗಿ (Assignment/Project Work) ನಿಗದಿಪಡಿಸಲಾಗಿದೆ. ಈ ಆಂತರಿಕ ಪರೀಕ್ಷೆಗಳನ್ನು ಅಧ್ಯಯನಾಂಗದ ಅಧ್ಯಾಪಕರೆ ನಡೆಸಿ ಆ ಅಂಕಗಳನ್ನು ಪರೀಕ್ಷಾಂಗಕ್ಕೆ ಸಲ್ಲಿಸಬೇಕು.

17.ನಾಮಾಂಕಿತ ಪಟ್ಟಿಗಳಲ್ಲಿ ಮತ್ತು ಅರ್ಜಿ ನಮೂನೆಗಳಲ್ಲಿ ಏನಾದರೂ ದೋಷಗಳು ಕಂಡುಬಂದಲ್ಲಿ ಸಂಬಂಧಪಟ್ಟ ಅಧ್ಯಯನಾಂಗದವರೆ ನೇರ ಹೊಣೆಗಾರರಾಗಿರುತ್ತಾರೆ.

18. ಕನಿಷ್ಠ ಶೇ 75 ರಷ್ಟು ಹಾಜರಾತಿಯನ್ನು ಕಡ್ಡಾಯವಾಗಿ ವಿದ್ಯಾರ್ಥಿಗಳು ಹೊಂದಿರಬೇಕಾಗಿದ್ದು, ಅಧ್ಯಯನಾಂಗದ ನಿರ್ದೇಶಕರು ಇದನ್ನು ದೃಢೀಕರಿಸಿ ಸಲ್ಲಿಸತಕ್ಕದ್ದು.

19.ವಿದ್ಯಾರ್ಥಿಗಳು ಪರೀಕ್ಷಾ ಅರ್ಜಿಗಳನ್ನು ವಿಶ್ವವಿದ್ಯಾಲಯದ ಅಧಿಕೃತ ವೆಬಸೈಟ್‌ಯಿಂದ ಡೌನಲೋಡ್ ಮಾಡಿಕೊಳ್ಳತಕ್ಕದ್ದು.

**<u>ಆದೇಶದ ಮೇರೆಗೆ</u>,**

**ಪರೀಕ್ಷಾ ನಿಯಂತ್ರಕರು**
ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಬೆಂಗಳೂರು.

ಪ್ರತಿಗಳು

- ಎಲ್ಲಾ ವಿಭಾಗಾಧ್ಯಕ್ಷರು. ಕ.ಸಂ.ವಿ. ಬೆಂಗಳೂರು.
- ಕಛೇರಿ ಪ್ರತಿ.

| FORM-01 | | | | | | | | | | |
|---|---|---|---|---|---|---|---|---|---|---|
| **KARNATAKA SAMSKRIT UNIVERSITY, CHAMARAJPETE, BAN-18** | | | | | | | | | | |
| **NAME OF THE DEPARTMENT:** | | | | | | | | | | |
| **NAME OF THE COURSE:** | | | | | | | | | | |
| SL. NO | REG NO | NAME OF THE STUDENTS | FATHER'S NAME | SUBJECT | I | II | III | IV | V | VI |
| 1 | | SHRUTHI H M | MUNIYAPPA | ALANKARA | | | | | | |
| 2 | | SHRIVANI K E | APPORAO K | ALANKARA | | | | | | |
| 3 | | SURESH BABU | RAMASWAMY | VYAKARANA | | | | | | |
| 4 | | VINUTHA B T | THIPPESWAMY | VYAKARANA | | | | | | |
| **DETAILS OF NR** | | | | | | | | | | |
| | | **CLASS** | **SUBJECT** | **NUMBER OF STUDENTS** | | | | | | |
| 1 | | BA-I | ALANKARA | 01 | | | | | | |
| 2 | | MA-II | SV VEDANTA | 01 | | | | | | |

# SAMPLE

| FORM-02 | | | | | | | | | |
|---|---|---|---|---|---|---|---|---|---|
| **KARNATAKA SAMSKRIT UNIVERSITY, CHAMARAJPETE, BAN-18** | | | | | | | | | |
| **NAME OF THE DEPARTMENT:** | | | | | | | | | |
| **NAME OF THE COURSE:** | | | | | | | | | |
| SL. NO | COURSE | NAME OF THE STUDENTS | SUBJECT | FATHER'S NAME | MOTHER'S NAME | GENDER | CASTE | FEE PAID | DD/ RECIEPT NO |
| 1 | MA | SHRUTHI H M | ALANKARA | MUNIYAPPA | RANGAMMA | FEMALE | GEN | 700 | 456099 |
| 2 | MA | SHRIVANI K E | ALANKARA | APPORAO K | VASUMATI | FEMALE | SC | 350 | 456099 |
| 3 | BA | SURESH | VYAKARANA | RAMASWAMY | SAVITHRI | MALE | GEN | 400 | 456099 |
| 4 | BA | VINUTHA B T | VYAKARANA | THIPPAYYA | GAYATRI | FEMALE | C-I | 200 | 456099 |

**DETAILS OF NR**

| **SL. NO** | **CLASS** | **SC** | | **ST** | | **CAT-I** | | **OBC** | | **GM** | | **REPEATER** | | **TOTAL** | |
|---|---|---|---|---|---|---|---|---|---|---|---|---|---|---|---|
| | | M | F | M | F | M | F | M | F | M | F | M | F | M | F |
| 1 | BA-I | 1 | 0 | 0 | 1 | 0 | 0 | 1 | 0 | 1 | 2 | 3 | 1 | 6 | 4 |
| 2 | BA-II | 0 | 1 | 1 | 0 | 0 | 1 | 1 | 0 | 0 | 1 | 2 | 0 | 4 | 3 |
| 3 | BA-III | 1 | 0 | 0 | 1 | 0 | 0 | 1 | 0 | 1 | 2 | 3 | 2 | 6 | 5 |
| 4 | MA-II | 1 | 0 | 1 | 0 | 1 | 0 | 1 | 0 | 1 | 0 | 5 | 2 | 10 | 2 |
| 5 | MA-IV | 1 | 1 | 1 | 0 | 0 | 1 | 1 | 1 | 2 | 1 | 5 | 3 | 10 | 7 |
| **TOTAL** | | **4** | **2** | **3** | **2** | **1** | **2** | **5** | **1** | **5** | **6** | **18** | **8** | **36** | **21** |